153 BRIDGES OF KARNATAKA ROAD DEVELOPMENT CORPN. LTD.,

L.A ON. No.2720

Pakage	- I	39 Nos	M/s. L & T Company
	- II	37 "	M/s. Sommon India Ltd.,
	- III	34 "	M/s. Nagarjuna Constn. Co. Ltd.,
	- IV	43 "	M/s. Nandi Engineering Ltd.,
	Total	153 Nos	

ಅರಣ್ಯ ಪ್ರದೇಶಗಳನ್ನು ಬೆಳೆಸಲು ಹಮ್ಮಿಕೊಂಡಿರುವ ಯೋಜನೆಗಳು

2219(2721) ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಅರಣ್ಯ ಪ್ರದೇಶಗಳನ್ನು ಬೆಳೆಸಲು ಸರ್ಕಾರ ಯಾವುದಾದರೂ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ವಿವರ ನೀಡುವುದು.

ಆ) ಕಳೆದ ವರ್ಷ ಅರಣ್ಯ ಪ್ರದೇಶ ಬೆಳೆಸಲು ಸಸಿಗಳನ್ನು ನೆಡುವ ನಿಟ್ಟಿನಲ್ಲಿ ಸರ್ಕಾರ ಎಷ್ಟು ಹಣವನ್ನು ಖರ್ಚು ಮಾಡಿದೆ ಮತ್ತು ಎಷ್ಟು ಸಸಿಗಳನ್ನು ನೆಡಲಾಗಿದೆ; ಜಿಲ್ಲಾವಾರು ಮಾಹಿತಿ ನೀಡುವುದು;

ಇ) ನೈಸರ್ಗಿಕ ಹಾಗೂ ಮಾನವ ಮೂಲದಿಂದ ಪ್ರತಿ ವರ್ಷ ಎಷ್ಟು ಅರಣ್ಯ ಪ್ರದೇಶ ನಾಶವಾಗುತ್ತಿದೆ;

ಈ) ಈ ಅಸಮತೋಲನವನ್ನು ಕಾಯ್ದುಕೊಳ್ಳಲು ಶೇಕಡ ಎಷ್ಟರಷ್ಟು ಅರಣ್ಯ ಪ್ರದೇಶವನ್ನು ಹೊಸದಾಗಿ ಬೆಳೆಸಬೇಕಾಗುತ್ತದೆ;

ಉ) ಇದಕ್ಕಾಗಿ ಯಾವುದಾದರೂ ವೈಜ್ಞಾನಿಕ ವಿಧಾನದಿಂದ ವರದಿ ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ ವಿವರ ನೀಡುವುದು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) ಹೌದು

ಯೋಜನೆಗಳ ಹೆಸರು

1. ಕ್ಷೀಣಿತ ಅರಣ್ಯ ಅಭಿವೃದ್ಧಿ
2. ಪಶ್ಚಿಮಘಟ್ಟಗಳ ಪರಿಸರಾಭಿವೃದ್ಧಿ ಮತ್ತು ಅರಣ್ಯೀಕರಣ
3. ನಗರ ಪ್ರದೇಶ ಹಸರೀಕರಣ
4. ರಸ್ತೆ ಬದಿ ನೆಡುತೋಪು
5. ಉರುವಲು ಮತ್ತು ಮೇವು
6. ಪರಿಶಿಷ್ಟ ಜಾತಿಯ ವಿಶೇಷ ಘಟಕ ಯೋಜನೆ
7. ಗಿರಿಜನ ಉಪ ಯೋಜನೆ
8. ದೇವರಕಾಡು
9. ಬೊಂಬು ಮತ್ತು ಬಿದಿರು
10. ಔಷಧ ಸಸಿಗಳು
11. ಶ್ರೀಗಂಧ ನೆಡುತೋಪು ಯೋಜನೆ
12. ತೇಗದ ನೆಡುತೋಪು ಯೋಜನೆ
13. ಕೇಂದ್ರ ಪುರಸ್ಕೃತ ಉರುವಲು ಮತ್ತು ಮೇವು ಯೋಜನೆ
14. ಕೇಂದ್ರ ಪುರಸ್ಕೃತ ಮರವಲ್ಲದ ಕಿರು ಅರಣ್ಯ ಹಾಗೂ ಔಷಧಯುಕ್ತ ಸಸ್ಯಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಯೋಜನೆ
15. ಸಮಗ್ರ ಅರಣ್ಯೀಕರಣ ಮತ್ತು ಪರಿಸರಾಭಿವೃದ್ಧಿ ಯೋಜನೆ
16. ಪರಿಶಿಷ್ಟ ಪಂಗಡ ಮತ್ತು ಗ್ರಾಮೀಣ ಬಡಜನರ ಸಹಯೋಗದೊಂದಿಗೆ ಕ್ಷೀಣಿತ ಅರಣ್ಯಗಳ ಅಭಿವೃದ್ಧಿ ಮತ್ತು ಫಲಾನುಭವ ಹಂಚಿಕೆ
17. ಭೂಸಾರ ಸಂರಕ್ಷಣೆ (ಅರಣ್ಯೀಕರಣ)
18. ಕಿರು ಅರಣ್ಯ ಉತ್ಪನ್ನ
19. ಸಮಗ್ರ ಅರಣ್ಯೀಕರಣ ಮತ್ತು ಪರಿಸರಾಭಿವೃದ್ಧಿ ಯೋಜನೆ
20. ಉದ್ಯೋಗ ಭರವಸೆ ಯೋಜನೆ
21. ಸಮಗ್ರ ಪಶ್ಚಿಮಘಟ್ಟಗಳ ಅಭಿವೃದ್ಧಿ ಯೋಜನೆ
22. ಡಿಪಿಎಪಿ
23. ಸಾಮಾಜಿಕ ಅರಣ್ಯ
24. ಪೂರ್ವ ಪ್ರಸ್ಥಭೂಮಿಯಲ್ಲಿ ಅರಣ್ಯ ಮತ್ತು ಪರಿಸರ ಯೋಜನೆ
25. ಪರಿಸರಾತ್ಮಕ ನೆಡುತೋಪು ಯೋಜನೆ
26. ಅರಣ್ಯ ಅಭಿವೃದ್ಧಿ ನಿಧಿ ಯೋಜನೆ

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ನೈಸರ್ಗಿಕ ವಿಕೋಪದಿಂದ ಅರಣ್ಯ ನಾಶವಾಗಿರುವುದಿಲ್ಲ. ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಗಳಿಗೆ ಅರಣ್ಯ ಸಂರಕ್ಷಣೆ ಕಾಯ್ದೆ 1980ರ ಪ್ರಕಾರ ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಕಳೆದ 3 ವರ್ಷಗಳಿಂದ ಬಿಡುಗಡೆ ಮಾಡಲಾದ ಅರಣ್ಯ ಪ್ರದೇಶದ ವಿವರ ಈ ರೀತಿ ಇದೆ.

1.	1998-1999	205.826 ಹೆ.
2.	1999-2000	708.885 ಹೆ.
3.	2000-2001	100.498 ಹೆ.
	ಒಟ್ಟು	1015.209 ಹೆ.

ಈ) ಮೇಲೆ ತಿಳಿಸಿರುವ ಕಾಯ್ದೆಯನ್ವಯ ಅರಣ್ಯ ಪ್ರದೇಶವನ್ನು ಬಿಡುಗಡೆಗೊಳಿಸಲಾದಾಗ ಅದಕ್ಕಾಗಿ ಉಪಯೋಗಿ ಸಂಸ್ಥೆಯು ನೀಡಿದ ಹಣದಿಂದ ಅರಣ್ಯೇತರ ಪ್ರದೇಶದಲ್ಲಿ (ಸಿ ಮತ್ತು ಡಿ ವರ್ಗದ ಜಮೀನು) ಬಿಡುಗಡೆಗೊಳಿಸಲಾದ ಅರಣ್ಯ ಪ್ರದೇಶದ ಸಮಾನ ವಿಸ್ತೀರ್ಣದಷ್ಟು ನೆಡುತೋಪನ್ನು ಬೆಳೆಸಬೇಕಾಗುತ್ತದೆ. ಅಥವಾ ದೇಣಿಗೆ ಅರಣ್ಯ ಪ್ರದೇಶದ 2ರಷ್ಟು ವಿಸ್ತೀರ್ಣದಲ್ಲಿ ಪರಿಹಾರಾತ್ಮಕ ನೆಡುತೋಪನ್ನು ಬೆಳೆಸಬೇಕಾಗುತ್ತದೆ.

ಉ) ಇಲ್ಲ.

ಅನುಬಂಧ

2000-2001ನೇ ಸಾಲಿನಲ್ಲಿ ಜಿಲ್ಲಾವಲಯ, ರಾಜ್ಯ ವಲಯ, ಗ್ರಾಮೀಣಾಭಿವೃದ್ಧಿ ಹಾಗೂ ಜೆಬಿಬಿಸಿ ನೆರವಿನ ಯೋಜನೆಗಳಡಿಯಲ್ಲಿ ಭರಿಸಲಾದ ವೆಚ್ಚದ ಹಾಗೂ ನೆಟ್ಟ ಸಸಿಗಳ ಜಿಲ್ಲಾವಾರು ವಿವರ.

ಕ್ರಮ ಸಂಖ್ಯೆ	ಜಿಲ್ಲೆ	ವೆಚ್ಚ (ರೂ.ಲಕ್ಷಗಳಲ್ಲಿ)	ನೆಟ್ಟ ಸಸಿಗಳು ಸಂಖ್ಯೆ (ಲಕ್ಷಗಳಲ್ಲಿ)
1	2	3	4
1.	ಬೆಂಗಳೂರು (ನಗರ)	315.641	3.311
2.	ಬೆಂಗಳೂರು (ಗ್ರಾಮಾಂತರ)	706.338	13.218
3.	ಬಾಗಲಕೋಟೆ	121.000	3.437

1	2	3	4
4.	ಬೆಳಗಾಂ	1,129.098	31.127
5.	ಬಳ್ಳಾರಿ	322.907	11.208
6.	ಬೀದರ್	225.288	9.370
7.	ಬಿಜಾಪುರ	88.092	4.312
8.	ಚಾಮರಾಜನಗರ	189.190	6.249
9.	ಚಿತ್ರದುರ್ಗ	308.230	10.258
10.	ಚಿಕ್ಕಮಗಳೂರು	171.774	15.915
11.	ದಕ್ಷಿಣ ಕನ್ನಡ	97.466	9.063
12.	ದಾವಣಗೆರೆ	251.560	11.837
13.	ಧಾರವಾಡ	360.518	15.865
14.	ಗದಗ	173.241	6.364
15	ಗುಲ್ಬರ್ಗಾ	200.213	6.923
16	ಹಾಸನ	311.977	12.258
17.	ಹಾವೇರಿ	252.563	8.907
18.	ಕೊಡಗು	51.080	4.298
19.	ಕೋಲಾರ	946.341	14.735
20.	ಕೊಪ್ಪಳ	179.387	9.514
21.	ಮಂಡ್ಯ	296.845	7.012
22.	ಮೈಸೂರು	289.619	3.426
23.	ರಾಯಚೂರು	98.206	2.758
24.	ಶಿವಮೊಗ್ಗ	290.738	55.136
25	ತುಮಕೂರು	470.101	18.103
26	ಉಡುಪಿ	46.889	9.402
27.	ಉತ್ತರ ಕನ್ನಡ	242.869	48.343
	ಒಟ್ಟು	3,142.606	332.062

ಈ ವೆಚ್ಚದಲ್ಲಿ ಮುಂಗಡ ಹಾಮಗಾರಿ, ಸಸಿ ತಯಾರಿಸುವಿಕೆ, ನೆಡುತೋಪು ನಿರ್ಮಾಣ ಹಳೆ ನೆಡುತೋಪುಗಳ ನಿರ್ವಹಣೆಯೂ ಸೇರಿದೆ.